# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ಯಲಹಂಕ ವಲಯ

## ಸಹಾಯಕ ಕಾರ್ಯಪಾಲಕ ಅಭಿಯಂತರರು ಕಛೇರಿ, ಯಲಹಂಕ ಉಪ ವಿಭಾಗ

## ವಾರ್ಡ್ ನಂ. 02 (ಚೌಡೇಶ್ವರಿ) ವಾರ್ಡ್ ಕಮಿಟಿ ಸಭೆ.

ದಿನಾಂಕ: 06-02-2021 ರಂದು ಬೆಳ್ಳಿಗೆ 11.00 ಗಂಟೆಗೆ ವಾರ್ಡ್ ನಂ-02 ಚೌಡೇಶ್ವರಿ ವಾರ್ಡ್ ಸಮಿತಿಯ ಮಾನ್ಯ ನೊಡೆಲ್ ಅಧಿಕಾರಿಗಳು ಹಾಗೂ ಕಾರ್ಯದರ್ಶಿಗಳು ಜೊತೆ ಯಲಹಂಕ ವಿಭಾಗ ಕಚೇರಿಯಲ್ಲಿರುವ ವಾರ್ಡ್ ಕಛೇರಿಯಲ್ಲಿ ನೆಡೆದ ವಾರ್ಡ್ ಕಮಟಿ ಸಭೆಯ ನಡುವಳಿಗಳು

| ಕ್ರ.ಸಂ | ಸಭೆಗೆ ಹಾಜರಾಗಿರುವ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು | ಸಭೆಗೆ ಹಾಜರಾಗಿರುವ ಅಧಿಕಾರಿಗಳು | ಷರಾ |
|---|---|---|---|
| 1 | ಶ್ರೀ.ಅಶೋಕ್ ಪಾಟಿಲ್ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ನೊಡೆಲ್ ಅಧಿಕಾರಿಗಳು. | ಶ್ರೀ.ಚಂದ್ರಶೇಖರ್ (ಅಸೆಸರ್) | |
| | | ಶ್ರೀ.ಲಿಂಗರಾಜು (ಹಿ.ಆ.ಪ) | |
| 2 | ಶ್ರೀ.ಚಂದ್ರಕಾಂತ್ ರಾಜ್ ಪಿ.ಎ ಸಹಾಯಕ ಅಭಿಯಂತರರು ಹಾಗೂ ಸಮಿತಿ ಕಾರ್ಯದರ್ಶಿ | ಶ್ರೀ.ಬಾಬು ರೆಡ್ಡಿ (ವಿದ್ಯುತ್) | |
| | | ಶ್ರೀ.ಸುಂದರೇಶ್ (ಸ.ಅ)(ಯೋಜನೆ) | |
| | | ಕು.ನಂದಶ್ರೀ (ಕಿ.ಆ.ಪ) | |

ಶ್ರೀ. ಚಂದ್ರಕಾಂತ್‌ರಾಜ್ ಪಿ.ಎ ಸಹಾಯಕ ಅಭಿಯಂತರರು ವಾರ್ಡ್ ನಂ -02 ಹಾಗೂ ಕಾರ್ಯದರ್ಶಿಗಳು ವಾರ್ಡ್ ಸಮಿತಿ ರವರು ಸಭೆಗೆ ಹಾಜರಿದ್ದ ನೊಡೆಲ್ ಅಧಿಕಾರಿಗಳು ಹಾಗೂ ಬಾಗವಹಿಸಿದ್ದ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ ಸಭೆ ಪ್ರಾರಂಭಿಸಲು ನೊಡೆಲ್ ಅಧಿಕಾರಿರವರನ್ನು ಕೋರಲಾಯಿತು ಮತ್ತು ಸಬೆಯಲ್ಲಿ ಚರ್ಚಿಸಬೇಕಾದ ವಿಷಯಗಳ ಬಗ್ಗೆ ತಿಳಿಸಲಾಯಿತು.

ಶ್ರೀ ಅಶೋಕ್ ಪಾಟಿಲ್, ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಸಮಿತಿಯ ನೊಡೆಲ್ ಅಧಿಕಾರಿಯುವರು ಸಬೆಯನ್ನು ಪ್ರಾರಂಭಿಸಿದರು.

1. ಮೊದಲನೇದಾಗಿ ವಾರ್ಡ್ ನಂ -02ರ ವ್ಯಾಪ್ತಿಯಲ್ಲಿ ಈ ಹಿಂದಿನ ಸಭೆಯಲ್ಲಿ ದಿನಾಂಕ: 16-1-2021ರ ಸಭೆಯಲ್ಲಿ ನಡೆದ ವಿಷಯಗಳ ಬಗ್ಗೆ ಚರ್ಚಿಸಲಾಯಿತು.
2. ಚೌಡೇಶ್ವರಿ ವಾರ್ಡ್ ನಂ-02ರ ಪರಿಮಿತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಕೆಲಸ ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲವೆಂದು ಹಸಿ ಕಸ ಮತ್ತು ಒಳಕಸವನ್ನು ಬೇರ್ಪಡಿಸುತ್ತಿಲ್ಲವೆಂದು ಶ್ರೀ.ಶಂಕರ್ ನಾಯಕ್ ರವರು ಅಕ್ಷೇಪಣೆ ವ್ಯಕ್ತಪಡಿಸಿದರು.
3. ಚೌಡೇಶ್ವರಿ ವಾರ್ಡ್ ನಂ -02ರ ವ್ಯಾಪ್ತಿಯಲ್ಲಿರುವ ನಾಗಾರ್ಜುನ ವಸತಿ ಸಂಕೀರ್ಣದಲ್ಲಿ ಸುಮಾರು 3 ತಿಂಗಳಿಂದ 14 ಪಾಯಿಂಟ್‌ಗಳಲ್ಲಿ ಸ್ಟ್ರೀಟ್ ಲೈಟ್‌ಗಳು ಉರಿಯುತ್ತಿಲ್ಲವೆಂದು ಶ್ರೀ.ಶಂಕರ್‌ನಾಯಕ್ ರವರು ಸಭೆಯಲ್ಲಿ ಅಕ್ಷೇಪಣೆ ವ್ಯಕ್ತಪಡಿಸಿದರು.
   (ಕ್ರಮ: ಕಾರ್ಯಪಾಲಕ ಅಭಿಯಂತರರು (ವಿದ್ಯುತ್)
4. ಚೌಡೇಶ್ವರಿ ವಾರ್ಡ್ ನಂ -02ರ ವ್ಯಾಪ್ತಿಯಲ್ಲಿರುವ ಯಲಹಂಕ 5ನೇ ಹಂತದ ಪ್ರದೇಶಗಳಲ್ಲಿ ಒಳಚರಂಡಿ ಸೌಲಭ್ಯ ಇರುವುದಿಲ್ಲ ವೆಂದು ಶ್ರೀ.ಶಂಕರ್ ನಾಯಕ್ ರವರು ಸಭೆಯಲ್ಲಿ ಅಕ್ಷೇಪಣೆ ವ್ಯಕ್ತಪಡಿಸಿದರು.
   (ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ)

ಮು.ತಿ.ನೋ

5. ಚೌಡೇಶ್ವರಿ ವಾರ್ಡ್ ನಂ-02ರ ಪರಿಮಿತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಕೆಲಸ ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲವೆಂದು ಹಸಿ ಕಸ ಮತ್ತು ಒಳಕಸವನ್ನು ಬೇರ್ಪಡಿಸುತ್ತಿಲ್ಲವೆಂದು ಶ್ರೀ.ಶಂಕರ್ ನಾಯಕ್ ರವರು ಅಕ್ಷೇಪಣೆ ವ್ಯಕ್ತಪಡಿಸಿದರು.
(ಕ್ರಮ : ಆರೋಗ್ಯಾಧಿಕಾರಿಗಳು ಬಿ.ಬಿ.ಎಂ.ಪಿ ಯಲಹಂಕ ವಲಯ)

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಯಿತು, ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

8/02/2021
ಕಾರ್ಯದರ್ಶಿ
ವಾರ್ಡ್ ಕಮಿಟಿ, ವಾರ್ಡ್ ನಂ. 02( ಚೌಡೇಶ್ವರಿ)

08/02/2021
ನೋಡೆಲ್ ಅಧಿಕಾರಿಗಳು
ವಾರ್ಡ್ ಕಮಿಟಿ, ವಾರ್ಡ್ ನಂ. 02(ಚೌಡೇಶ್ವರಿ)

ಪ್ರತಿಯನ್ನು:

1. ಮಾನ್ಯ ಜಂಟಿ ಆಯುಕ್ತರು ಯಲಹಂಕ ವಲಯರವರ ಮಾಹಿತಿಗಾಗಿ.
2. ಮಾನ್ಯ ಮುಖ್ಯ ಅಭಿಯಂತರರು ಯಲಹಂಕ ವಲಯರವರ ಮಾಹಿತಿಗಾಗಿ.
3. ಆರೋಗ್ಯ ವೈದ್ಯಾಧಿಕಾರಿಗಳು ಯಲಹಂಕ ವಲಯರವರ ಮಾಹಿತಿಗಾಗಿ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, (ವಿದ್ಯುತ್) ಯಲಹಂಕ ವಲಯ ರವರ ಮಾಹಿತಿಗಾಗಿ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ಯಲಹಂಕ ವಿಭಾಗ ರವರ ಮಾಹಿತಿಗಾಗಿ.
6. ಕಛೇರಿ ಕಡತಕ್ಕೆ.